# ತಾಯಿ ಎಂಬ ಹೆಣ್ಣು

**ರಾಜು ಎನ್.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ರಾಮಯ್ಯ ಕಲಾ, ವಿಜ್ಞಾನ ಮತ್ತು
ವಾಣಿಜ್ಯ ಕಾಲೇಜು.
ಮತ್ತಿಕೆರೆ, ಬೆಂಗಳೂರು.

**Article Link: https://aksharasurya.com/2023/12/raju-n/**

## ABSTRACT:

ಜಗತ್ತಿನಲ್ಲಿ ಬೆಲೆ ಕಟ್ಟಲಾಗದ ಮೌಲ್ಯ ಎಂದರೆ ಅದು 'ತಾಯಿ' ಎನ್ನುವ ಪದ ಮಾತ್ರ. ಈ ಕಥಾ ಭಾಗವು ಹೆಣ್ಣಿನ ಬಗೆಗೆ ನಾನಾ ವಿಚಾರಗಳನ್ನು ತಿಳಿಸಿಕೊಟ್ಟರು ಸಹ ಪ್ರಮುಖವಾಗಿ ಕಂಡದ್ದು ತಾಯಿಯ ವಾತ್ಸಲ್ಯ ಮತ್ತು ಪ್ರೀತಿಯ ಗುಣಗಳು. ಹೆಣ್ಣು ಜನಿಸಿದಾಗಿನಿಂದ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾಳೆ. ಅದರಲ್ಲಿ ಪ್ರಮುಖವಾದುದು ತಾಯಿಯ ಪಾತ್ರ. ಜಗತ್ತಿನ ಯಾವುದೇ ಸೃಷ್ಟಿ ಹೆಣ್ಣಿನಿಂದಲೇ ಆಗಬೇಕು ಎಂಬುದು ಮನವರಿಕೆಯಾಗುತ್ತದೆ. ತನ್ನ ಮಕ್ಕಳನ್ನು ತಾಯಿಯಾದವಳು ಸಂಕಷ್ಟದ ಸಮಯದಲ್ಲಿ ಪಾರು ಮಾಡುವಳು ಅದಕ್ಕಾಗಿ ತಾನು ಯಾವ ತ್ಯಾಗಕ್ಕೂ ಸಿದ್ಧರಿವಳು ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಈ ಕಥಾ ಭಾಗದಲ್ಲಿ ದೌರ್ಜನ್ಯ, ಶೋಷಣೆ, ಪುರುಷ ಪ್ರಧಾನ ವ್ಯವಸ್ಥೆಯ ಕರಾಳ ಮುಖಗಳು ಕಂಡು ಬಂದರೂ ಸಹ ಇದರ ನಡುವೆ ಮಮತೆಯ, ಪ್ರೀತಿಯ ಗುಣಗಳನ್ನು ಜಗತ್ತಿಗೆ ಸಾರಿದ ತಾಯೆಂಬ ಹೆಣ್ಣಿನ ಪಾತ್ರವು ಮುಖ್ಯವಾಗಿ ಕಾಣಬರುತ್ತದೆ. ಗಂಡನಾದವನು ತನ್ನನ್ನು ದೂರ ತಳ್ಳಿದಾಗಲು ತನ್ನ ಮಕ್ಕಳಿಗಾಗಿ ತಾನು ಆದರ್ಶ ತಾಯಿಯಾಗಿ ನಿಲ್ಲಲು ಪ್ರಯತ್ನಿಸುವ ಪ್ರಸಂಗ ಕಣ್ಣಟ್ಟುತ್ತದೆ. ಸಮಾಜದಲ್ಲಿ ಗಂಡಿನ ಪರವಾಗಿ ಎಲ್ಲಾ ವಿಚಾರಗಳನ್ನು ಬರೆದುಕೊಂಡಿರುವಾಗ ತನ್ನ ಮತ್ತು ತನ್ನ ಮಕ್ಕಳ ಪರವಾಗಿ ನಿಲ್ಲುವ ಶಕ್ತಿ ತಾಯಿ ಮಾತ್ರ ಎಂಬುದನ್ನು ತಿಳಿಸಿಕೊಡುತ್ತದೆ. ಕಥೆ ಸಣ್ಣದಾದರೂ ಸಹ ಇಡೀ ಜಗತ್ತನ್ನು ಸೃಷ್ಟಿಸಿ, ನಿರ್ಮಿಸಿ ಅದನ್ನು ಪೋಷಿಸುತ್ತಿರುವ ತಾಯಿಯ ತ್ಯಾಗ, ಪ್ರೀತಿ, ವಾತ್ಸಲ್ಯ, ಮಮತೆಯ ಬಗೆಗೆ ಒಂದು ಹೊಸ ಸಂದೇಶವನ್ನು ಈ ಕಥಾ ಭಾಗ ನಿರೂಪಿಸುತ್ತದೆ.

## KEY WORDS:

ತಾಯಿ, ಹೆಣ್ಣು, ವಾತ್ಸಲ್ಯ, ಪ್ರೀತಿ, ಜಗತ್ತಿನ ಶಕ್ತಿ, ಅಸ್ತಿತ್ವ, ಅಸಹಾಯಕತೆ.

ಮನೆ ಮನೆಯಲಿ ದೀಪ ಮುಡಿಸಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ?

– ಜಿ. ಎಸ್. ಶಿವರುದ್ರಪ್ಪ

'ಹೆಣ್ಣು' ಅಥವಾ 'ತಾಯಿ' ಎಂಬ ಎರಡಕ್ಷರದ ಪದವು ಇಡೀ ಜಗತ್ತಿನ ಸೃಷ್ಟಿಯ ಸಂಕೇತವಾಗಿ ಗೋಚರವಾಗುತ್ತದೆ. ನಾವು ಜಗತ್ತಿನಲ್ಲಿ ಸೃಷ್ಟಿ ಕಾರ್ಯ ನಡೆಯುವ ಎಲ್ಲಾ ಪ್ರಕ್ರಿಯೆಗಳಿಗೆ ಹೆಣ್ಣು ಅಥವಾ ತಾಯಿ ಎಂಬ ಅರ್ಥವನ್ನೇ ನೀಡುತ್ತೇವೆ. ಆ ದೇವರು ಕೂಡ ಕೊನೆಗೆ ತಾಯಿಯ ಗರ್ಭದಲ್ಲೇ ಜನಿಸಬೇಕು ಎಂಬ ವಾಕ್ಯವು ಹೆಣ್ಣನ್ನೇ ಪ್ರತಿನಿಧಿಸುತ್ತದೆ. ಇಲ್ಲಿ ಹೇಳಹೊರಟಿರುವ ಕಥಾ ಭಾಗವಾದ ಒಮ್ಮೆ ಹೆಣ್ಣಾಗು ಪ್ರಭುವೇ ಬಾನು ಮುಷ್ತಾಕ್‌ರವರು ತಮ್ಮ ಈ ಕಥೆ ಯಲ್ಲಿ ಹೆಣ್ಣು ಮತ್ತು ತಾಯಿ ಎಂಬ ಪರಿಕಲ್ಪನೆಗಳಿಗೆ ಉತ್ತರವನ್ನು ಕಲ್ಪಿಸುತ್ತಾರೆ.

ತಾಯ್ತನಕ್ಕೆ ಇಷ್ಟಪಡದ ಹೆಣ್ಣು ಅಪರೂಪದಲ್ಲಿ ಅಪರೂಪ. ಅಂತಹ ಹೆಣ್ಣು ತನ್ನ ಸಂಸಾರಕ್ಕೆ ಎಲ್ಲಿಲ್ಲದ ಮಹತ್ವವನ್ನು ಕಲ್ಪಿಸಿರುತ್ತಾಳೆ. ಹೆಣ್ಣು ಅಥವಾ ತಾಯಿ ಎಂಬ ಪರಿಕಲ್ಪನೆಗಳಿಗೆ ವಿವಿಧ ಅರ್ಥ ಗಳನ್ನು ಕಲ್ಪಿಸುವ ಅಗತ್ಯತೆಯಿಲ್ಲ ಎಂದೇ ಅನಿಸುತ್ತದೆ. ಇದಕ್ಕೆ ಕಾರಣವು ಉಂಟು ಹೆಣ್ಣಾದವಳು ಮಾತೃತ್ವದ ಗುಣಗಳನ್ನು ತನ್ನಿಂತಾನೇ ಪಡೆದುಕೊಂಡಿರುತ್ತಾಳೆ. ಈ ಮೇಲಿನ ಕಥಾ ಭಾಗದಲ್ಲಿ ಬರುವ ಬಾನು ಮುಷ್ತಾಕ್ ರವರು ಚಿತ್ರಿಸಿರುವ ಹೆಣ್ಣಿನ ಪಾತ್ರ (ಕಥೆಯಲ್ಲಿ ಪಾತ್ರಕ್ಕೆ ಹೆಸರಿಲ್ಲ) ತಾಯೆಂಬ ಹೆಣ್ಣು ಪರಿಕಲ್ಪನೆಗೆ ಅರ್ಥಗಳನ್ನು ಕೊಡುತ್ತದೆ.

ಒಮ್ಮೆ ಹೆಣ್ಣಾಗು ಪ್ರಭುವೇ ಕಥೆಯು ಹೆಣ್ಣಿನ ಬಾಲ್ಯ, ವಿವಾಹ, ಬಡತನ, ಶೋಷಣೆ, ಹೆಣ್ಣಿನ ಅಸ್ತಿತ್ವ, ಸಂಸಾರದ ಜವಾಬ್ದಾರಿ, ಅಸಹಾಯಕತೆ ಇತ್ಯಾದಿ ಅಂಶಗಳನ್ನು ಪ್ರತಿನಿಧಿಸುತ್ತದೆ. ಅಂತೆಯೇ ತಾಯಿ ಹೆಣ್ಣು ಎಂಬ ಅಂಶಕ್ಕೆ ತನ್ನದೇ ರೀತಿಯಲ್ಲಿ ಉತ್ತರ ನೀಡುತ್ತದೆ. ಇಲ್ಲಿ ಶುರುವಾತಿನಲ್ಲೆ ಹೆಣ್ಣು ಮಗುವನ್ನು ಬಂಧನದ ಗೂಡಿನಲ್ಲಿ ಬೆಳೆಸುವ ಪರಿ ಮತ್ತು ತನ್ನ ಬಾಲ್ಯದ ದಿನಗಳನ್ನು ಹೆಣ್ತನದ ಪರಿಧಿಯಲ್ಲಿ ಕಳೆಯುವಾಗ ಆಕೆಗೆ ಗಂಡಿಗೆ ನೀಡಿರುವ ಉತ್ಕೃಷ್ಟದ ಸ್ಥಾನಮಾನಗಳನ್ನು ದೇವರ ಬಳಿಯೇ ಪ್ರಶ್ನಿಸಿ ಅದಕ್ಕೆ ಉತ್ತರ ಸಿಗದಿದ್ದಾಗ ಸುಮ್ಮನಾಗುತ್ತಾಳೆ. ಅಂತೆಯೇ ಕಥಾ ನಾಯಕಿಯ ತಾಯಿಯು ಒಂದು ಹೆಣ್ಣು, ಆಕೆ ಹೇಳುವ ಮಾತು ಮಾತ್ರ ತಾಯಿ ಮತ್ತು ಹೆಣ್ಣಿನ ಗುಣಗಳನ್ನು ಪ್ರತಿನಿಧಿಸುತ್ತದೆ. ಕಾರಣ ಅವಳಿಗೆ ನೀಡಿರುವ ತಾಳ್ಮೆ,

ವಾತ್ಸಲ್ಯ, ತ್ಯಾಗದ ಗುಣಗಳು. "ಅವನು ನಿನ್ನ ಪರದೈವ... ಅವನು ಹೇಳಿದಂತೆ ಕೇಳಬೇಕು... ನಿಷ್ಠೆಯಿಂದ ಅವನ ಸೇವೆ ಮಾಡ್ಬೇಕು..." ಇಲ್ಲಿ ಗಂಡಿನ ಪರಾಕಷ್ಠೆಯ ಪ್ರಶ್ನೆ ಬಂದರೂ ಸಹ ನಮಗೆ ಇಲ್ಲಿ ಒಬ್ಬ ತಾಯಿ ತನ್ನ ಮಗಳಿಗೆ ಹೇಳುವ ಸಂಸ್ಕಾರದ ಮಾತಿನ ಅಂಶಗಳು ನಮಗೆ ಕಾಣಬರುತ್ತದೆ. ಅಂತೆಯೇ ಆಕೆಯೂ ತನ್ನ ಮಕ್ಕಳನ್ನು ಹೇಗೆ ಸಮಾಜದಲ್ಲಿ ಬೆಳೆಸಬೇಕು ಮತ್ತು ಹೇಗೆ ಮುನ್ನಡೆಯಬೇಕು ಎಂಬುದನ್ನು ತಿಳಿವಿಗೆ ತರುತ್ತಾಳೆ. ಮುಂದೆ ಕಥೆಯಲ್ಲಿ ನಾಯಕಿಯು ಹಾಗೆಯೇ ಮುನ್ನಡೆಯುತ್ತಾಳೆ ಕೂಡ. ಕಥಾ ನಾಯಕಿಯು ವಿವಾಹದಾಗಿನ ನಂತರದ ಸನ್ನಿವೇಶದಲ್ಲಿ ಅನೇಕ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದರೂ ಸಹ ತನಗೇ ಮಗುವಾಗುವ ದಿವ್ಯ ಕ್ಷಣಗಳನ್ನು ತಿಳಿದು ಸಂತಸವನ್ನೇನೋ ಪಡುತ್ತಾಳೆ. ಆದರೆ ತನ್ನ ಗಂಡ ಇದಕ್ಕೆ ಕಿಂಚಿತ್ತೂ ಮನ್ನಣೆ ಕೊಡದೇ ಇದ್ದಾಗ ನೋವನುಭವಿಸಿದರೂ ಸಹ ತಾಯಿ ಆಗುವೆನು ಎಂಬ ಸಂತಸದ ವಿಷಯವೇ ಆಕೆಗೆ ಇದೆಲ್ಲವನ್ನೂ ಮರೆಸುತ್ತದೆ.

ಅಂತೆಯೇ ಆಕೆಯನ್ನು ತನ್ನ ಗಂಡ ವರದಕ್ಷಿಣೆಗಾಗಿ ತವರು ಮನೆಗೆ ಕಳುಹಿಸಿದಾಗ ಮತ್ತು ಅಲ್ಲಿಂದ ಹಿಂದಿರುಗುವಾಗ ತನ್ನ ತಾಯಿ ತನ್ನ ಮಗಳಿಗೆ ಸ್ಪಂದಿಸುವ ಪರಿಯು, ಆಕೆಯ ಗುಣಗಳು ನಮಗೆ ಕಾಣಸಿಗುತ್ತದೆ. ಕಥಾ ನಾಯಕಿಯು ಹೇಳುವಂತೆ, "ಅಮ್ಮ ಹೊಟ್ಟೆ ತುಂಬಾ ಉಣಿಸಿದಳು, ಮನದ ತುಂಬಾ ಹಾರೈಸಿದಳು... ತನ್ನ ಒಲವಿನ ಮುತ್ತನ್ನೆಲ್ಲಾ ಪೋಣಿಸುವಂತೆ ನೀಲ ಜಡೆಯನ್ನು ಹೆಣೆದಳು..." ಎಂಬ ಮಾತಿನಲ್ಲಿ ತಾಯಿಯು ತನ್ನ ಮಗುವಿಗೆ ಎಷ್ಟೇ ದೊಡ್ಡವಳಾದಳು ಪ್ರೀತಿಸುವ ಪರಿ ಮಾತ್ರ ಬದಲಾಗುವುದಿಲ್ಲ ಎಂಬುದನ್ನು ಸಾಕ್ಷೀಕರಿಸುತ್ತದೆ. ತನ್ನ ಮಗು ಸಮಾಜದ ಮತ್ತು ಸಂಸಾರದ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಂಡರು ಸಹ ತಾಯಿಗೆ ಆತ ಅಥವಾ ಆಕೆ ಮಗುವೇ ಆಗಿರುತ್ತಾರೆ ಎಂಬುದಕ್ಕೆ ನಿದರ್ಶನವೇ ಈ ದೃಶ್ಯ. ನಂತರದ ಭಾಗದಲ್ಲಿ ವರದಕ್ಷಿಣೆ ಹಣ ತರುವಾಗ ಕಥಾ ನಾಯಕಿಯ ತಾಯಿಯು ಅಪಘಾತದಲ್ಲಿ ತೀರಿಕೊಂಡಾಗ ತನಗಾದ ನೋವಿನ ತುಮುಲತೆಯು ನಮಗೆ ಕಾಣಿಸುತ್ತದೆ. "ತನ್ನ ತಾಯಿಯನ್ನು ಆಸ್ಪತ್ರೆಯವರು ಕೊಯ್ದಾಗ... ಹೃದಯವನ್ನು ಹೋಳು ಮಾಡಿದ್ದರೆ, ಅದರಲ್ಲಿ ಸಿಗುತ್ತಿದ್ದದ್ದು ಹೆಪ್ಪುಗಟ್ಟಿದ ರಕ್ತವಲ್ಲ; ಬದಲಿಗೆ ಹೆಪ್ಪುಗಟ್ಟಿದ ಆತ್ಮ..." ಎಂಬ ಮಾತಲ್ಲಿ ತಾಯಿಯು ತನ್ನ ಮಗಳ ಕಷ್ಟಗಳನ್ನು ತೊಲಗಿಸಲು ಆಕೆ ಹೆಣಗಿ ನಂತರ ಮಗಳನ್ನು ಕಾಣಲು ಬರುವಾಗ ಸಾವನ್ನು ಅಪ್ಪಿದಾಗ ಹೃದಯ ತಾಯ್ತನವನ್ನೆ ಪ್ರತಿಬಿಂಬಿಸುತ್ತಿತ್ತು ಎಂಬುದು ತಿಳಿಯುತ್ತದೆ.

ಈ ಕಥೆಯಲ್ಲಿ ಗಂಡನಾದವನು ದರ್ಪದ ಅಮಲಿನಲ್ಲಿ ಹೆಣ್ಣಿಗೆ ಯಾವುದೇ

ಪ್ರಾಶಸ್ತ್ಯ ನೀಡದೇ ಇರುವಾಗಲು ಮತ್ತು ಆತನಿಂದ ಪಡೆದ ಮೊದಲ ಮಗು ಹೆಣ್ಣಾದಾಗಲು ಆಕೆಗೆ ಖುಷಿಯ ಕ್ಷಣಗಳಿಗೆ ಪಾರವೇ ಇರಲಿಲ್ಲ. ಏಕೆಂದರೆ ತನ್ನ ಅಮ್ಮನನ್ನೇ ಪಡೆದೆನು ಎಂಬ ಸಂತಸ. "ಮಗಳೊಬ್ಬಳು ಹುಟ್ಟಿದಳು... ಅಮ್ಮನಂತೆಯೇ ಚಹರೆ... ಕಣ್ಣುಗಳೋ ಆಳವಾದ ಕೊಳಗಳು. ಅಮ್ಮನಂತೆಯೇ ಅವಳನ್ನು ಎತ್ತಿ ಲಾಲಿಸಿ ಮುದ್ದು ಮಾಡಿ ಆಡಿಸಿದೆ." ಎಂಬ ಮಾತುಗಳಲ್ಲಿ ತಾಯಿಯಾದ ಸಂತಸದ ಕ್ಷಣಗಳನ್ನು ಅನುಭವಿಸಿದ್ದಲ್ಲದೇ, ತನ್ನ ಮಗಳಲ್ಲಿ ತನ್ನ ತಾಯಿಯನ್ನು ಕಾಣುವ ಮಾತೃತ್ವದ ಗುಣಗಳು ಕಂಡು ಬರುತ್ತದೆ. ತನ್ನ ತಾಯಿಯದ್ದೇ ಗುಣಗಳು ಇಲ್ಲಿ ವ್ಯಕ್ತವಾಗುತ್ತದೆ. ಕಾರಣ ಕಥಾನಾಯಕಿಗೆ ತನ್ನ ತಾಯಿಯ ಹೆಣ್ತನ ಮತ್ತು ತಾಯ್ತನದ ಗುಣಗಳನ್ನು ಪೋಣಿಸಿ ಬೆಳೆಸಿರುವುದು, ಆಕೆಗೆ ಅದೇ ಗುಣಗಳು ಬಂದಿರುವುದು ಕಾಣ ಸಿಗುತ್ತದೆ. ನಂತರ ಆಕೆಗೆ ಎರಡನೇ ಮಗುವು ಜನಿಸುತ್ತದೆ. ಆದರೆ ಗಂಡನಾದವನ ದರ್ಪ, ಅಹಂಕಾರ, ಹಿರಿಮೆ ಯಾವುದು ಕಡಿಮೆ ಮಾತ್ರ ಇರಲಿಲ್ಲ. ಹೀಗೆ ಜೀವನ ನಡೆಸುತ್ತಿರುವಾಗಲೇ, ಆಕೆಗೆ ಅನಾರೋಗ್ಯ ಹದಗೆಟ್ಟು ಆಸ್ಪತ್ರೆ ಸೇರುತ್ತಾಳೆ. ಆಸ್ಪತ್ರೆಯಲ್ಲಿ ಇರುವಾಗಲೇ ಗಂಡ ಈಕೆಯ ಬಳಿ ಬಂದು ಎರಡನೇ ಮದುವೆಯ ಪ್ರಸ್ತಾಪ ಮಾಡಿ ಗೆಲ್ಲುತ್ತಾನೆ ಕೂಡ. ತನ್ನ ಗಂಡ ಎರಡನೇ ಮದುವೇ ಆಗುತ್ತಾನೆ ಎಂಬ ಮಾತು ಕೇಳಿದೊಡನೆಯೇ ಆಕೆಗೆ ತನ್ನ ಮತ್ತು ತನ್ನ ಮಕ್ಕಳ ಜೀವನದ ಪ್ರಶ್ನೆ ಎದುರಾಗುತ್ತದೆ. ಗಂಡಿನ ರಕ್ಷಣೆ ಇಲ್ಲದೇ ಹೇಗೆ ಜೀವನ ನಿರ್ವಹಿಸಲಿ, ಬದುಕನ್ನು ಹೇಗೆ ಸಾಗಿಸಲಿ ಎಂಬ ಪ್ರಶ್ನೆಯೇನೋ ಎದುರಾಗುತ್ತದೆ. ಇದರ ನಡುವೆ ಅವನು ಈಕೆಯನ್ನು, ಎರಡನೇಯ ಮದುವೆ ಮಾಡಿಕೊಳ್ಳಲು "ಕತ್ತಿನಲ್ಲಿರುವ ಸರ ಕೊಡು" ಎಂದಾಗ ಒಂದು ಕ್ಷಣ ಹಿಂಜರಿಯುತ್ತಾಳೆ. ಕಾರಣ ತನ್ನ ತಾಯಿ ಹೇಳಿದ 'ಗಂಡನೇ ಪರದೈವ...' ಎಂಬ ಮಾತೇ ಇರಬಹುದು. ಆದರೆ ಈಗ ಗಂಡನಿಗಿಂತ ತನ್ನ ಮಕ್ಕಳ ಬಗೆಗಿನ ಒಲವೇ ಹೆಚ್ಚಾಗಿದ್ದರಿಂದಾಗಿ, ಮೊದಲ ಬಾರಿಗೆ ಆಕೆ ಅವನನ್ನು ದಿಕ್ಕರಿಸುತ್ತಾಳೆ ಕೂಡ. ಆತ ಸರವನ್ನು ಕೊಡು ಎಂದಾಗ, ಆಕೆ "ಅದೀಗ ಯಾಕೆ ಬೇಕಾಗಿದೆ?" ಎಂದು ಗಂಡನಿಗೆ ಎದುರಾಡಿದಾಗ, ಆತ ಹೇಳುವುದು "ಮರು ಮದುವೆಯಾಗ್ತಿದೀನಿ, ಆಕೆಗೆ ಕೊಡಬೇಕು..." ಎಂದನು. ಆ ಕ್ಷಣದಲ್ಲಿ ಆಕೆಗೆ ಅನಿಸಿದ್ದು ಮಾತ್ರ, "ಅವನ ಕೆನ್ನೆಗೆ ಬಿಗಿಯಲೇ... ಛೇ... ಅಸಾಧ್ಯ... ಮಕ್ಕಳ ಗತಿಯೇನು?" ಎಂಬ ಮಾತನ್ನು ತನ್ನ ಮನಸಿನಲ್ಲೇ ಮಾತನಾಡಿಕೊಳ್ಳುತ್ತಾಳೆ. ಆದರೆ ಆಕೆ ಏನು ಮಾಡುವ ಸ್ಥಿತಿಯಲ್ಲಿರಲಿಲ್ಲ.. ತಾಯಿಯ ನಾಣ್ಣುಡಿಗಳು ಮತ್ತು ಮಕ್ಕಳ ಜವಾಬ್ದಾರಿಯು ಆಕೆಯನ್ನು ಸುಮ್ಮನಾಗಿಸುತ್ತದೆ, ಏಕೆಂದರೆ ಆಕೆಯು ಒಂದು ಹೆಣ್ಣು ಮತ್ತು ತಾಯಿ. ಆಕೆಗೆ ಆ ಸರವನ್ನು ತನ್ನ ತಾಯಿಯು ತನ್ನ ಎರಡೆಳೆ ಸರವನ್ನು ಕರಗಿಸಿ ಮಾಡಿಸಿದ್ದು, ಆಕೆಯ ನೆನಪಿಗೆ ನೆನಪುಗಳು ಮತ್ತು ಭೌತಿಕ ಆಸ್ತಿ

ನೆನಪಿಗೆ ಇದೊಂದೆ ಆಧಾರವೆನಿಸುತ್ತದೆ. ಹಾಗಾಗಿಯೇ ಆಕೆ ತನ್ನ ತಾಯಿ ಮೇಲಿನ ಪ್ರೀತಿಗೆ ಮೊದಲ ಬಾರಿಗೆ ತನ್ನ ಗಂಡನನ್ನು ವಿರೋಧಿಸಿದ್ದು ಕೂಡ.

ಇಲ್ಲಿ ಕಥಾನಾಯಕಿಯು ತಾಯಿ ಮತ್ತು ಹೆಣ್ಣಿನ ಪಾತ್ರಗಳನ್ನು ನಿರ್ವಹಿಸುತ್ತಲೇ, ಸಮಾಜದ ಸೃಷ್ಟಿಕರ್ತೆಯ ಬಗೆಗೆ ಹೊಸ ವ್ಯಾಖ್ಯಾನವನ್ನು ಬರೆದಿದ್ದಾಳೆ. ನಂತರದಲ್ಲಿ ತನ್ನ ಗಂಡನಿಗೆ ತನ್ನ ಕೊರಳ ಸರ ಕೊಡದೇ ಇದ್ದದು, ಎರಡನೇ ಮದುವೇ ಆಗುವ ಸಲುವಾಗಿ ಆತ ಈಕೆಯನ್ನು ಆಸ್ಪತ್ರೆಗೆ ನೋಡಲು ಸಹ ಬರುವುದಿಲ್ಲ. ಆದರೆ ತಾಯಿ ಹೃದಯ ಹೊಂದಿದ್ದ ಹೆಣ್ಣು ಆಸ್ಪತ್ರೆಯಲ್ಲಿ ನೀಡುವ ಧರ್ಮದ ಹೆಸರಿನಲ್ಲಿ ನೀಡುವ ಅನ್ನವನ್ನು ತಾನು ಮತ್ತು ಮಕ್ಕಳು ಹೇಗೋ ತಿಂದು ಸಹಿಸಿಕೊಂಡರು. ಆದರೆ ಆಸ್ಪತ್ರೆಯವರು ಈಕೆಯನ್ನು ಡಿಸ್ಚಾರ್ಜ್ ಮಾಡಿದಾಗ ಆಕೆಗೆ ಲೋಕವೇ ಕಳಚಿದಂತಾಯಿತು. ಆದರೆ ತಾಯಿಯಾದ ಆಕೆಗೆ ಮಕ್ಕಳ ಜವಾಬ್ದಾರಿ ನೆನಪಾಯಿತು. ತನ್ನ ಮಕ್ಕಳೊಡನೆ ತನ್ನ ಮನೆಕಡೆಗೆ ಹೆಜ್ಜೆ ಇಟ್ಟಾಗ ಆಘಾತಕಾರಿ ದೃಶ್ಯ ಕಂಡು ಬಂತು, ಮನೆ ಮುಂದೆ ಚಪ್ಪರ, ಮನೆಗೆ ದೀಪಾಲಂಕಾರ, ಮನೆಗೆ ಬೀಗ. ಆಕೆ ಅಲ್ಲಿಯೆ ಜಗಲಿ ಮೇಲೆ ತನ್ನ ಎರಡು ಹಸುಗೂಸುಗಳನ್ನು ಹಾಕಿಕೊಂಡು ಕೂತಿರುವಾಗ, ತನ್ನ ಗಂಡ ಎರಡನೇ ಮದುವೆ ಆಗಿ ಬಂದು ತನ್ನ ಮೊದಲ ಹೆಂಡತಿ, ಮಕ್ಕಳ ಕಡೆಗೆ ಗಮನ ಸಹ ಹರಿಸದೇ ತನ್ನ ಎರಡನೇ ಹೆಂಡತಿಯೊಡನೇ ಮನೆ ಸೇರುವನು. ಇಲ್ಲಿ ಆಕೆಗೆ ಅನಿಸಿದ್ದು, ಗಂಡಿಗೇಕೆ ಹೆಣ್ಣು ಮತ್ತು ತಾಯ್ತನದ ಗುಣಗಳನ್ನು ನೀಡಲಿಲ್ಲ? ಕಾರಣವು ಅಲ್ಲೇ ಇದೆ ಆತನಿಗೆ ದರ್ಪ, ಅಹಂಕಾರ, ಹಿರಿಮೆ, ಗರಿಮೆಗಳ ಗುಣಗಳ ನೀಡಿರುವಾಗ ಉಳಿದ ಪ್ರೀತಿ ವಾತ್ಸಲ್ಯ ಮತ್ತು ತಾಳ್ಮೆ ಗುಣಗಳನ್ನು ಪಡೆದದ್ದು ಹೆಣ್ಣು ಮಾತ್ರ ಎಂಬುದು.

ಇಲ್ಲಿ ಎಲ್ಲವನ್ನೂ ಸಹಿಸಿಕೊಂಡು ನಡೆದದ್ದು ಮಾತ್ರ, ತನ್ನ ಮಕ್ಕಳಿಗಾಗಿಯೇ ಹಾಗೂ ತನ್ನ ತಾಯಿ ತನಗೆ ನೀಡಿದ ಹೆಣ್ತನದ ಮತ್ತು ತಾಯ್ತನದ ಗುಣಗಳನ್ನು ಕಾಪಾಡುವ ಹೊರತು ಇನ್ಯಾವ ಪ್ರತಿಷ್ಠೆಗೂ ಅಲ್ಲ.

ಈ ಕಥಾ ಭಾಗದಲ್ಲಿ ಕಥಾ ನಾಯಕಿಯ ಪಾತ್ರವು ತಾಯಿ ಮತ್ತು ಹೆಣ್ಣಿನ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ. ಇದಕ್ಕೆ ಈ ಕಥಾ ಭಾಗದಲ್ಲಿ ಬರುವ ನಿದರ್ಶನಗಳೆ ಸಾಕ್ಷಿ. ನಾಯಕಿಗೆ ತನ್ನ ಗಂಡ ನೀಡುವ ಪ್ರತಿಯೊಂದು ಕಷ್ಟದ ಕ್ಷಣಗಳನ್ನು ತನ್ನ ತಾಯಿ ಹೇಳಿ ಕಳಿಸಿರುವ ಸಂಸ್ಕಾರದ ಮಾತುಗಳನ್ನು ಅನುಕ ರಿಸಿಯೇ ಅದನ್ನೆಲ್ಲಾ ನಿರ್ವಹಿಸುತ್ತಾಳೆ. ತನ್ನ ಮಕ್ಕಳ ಭವಿಷ್ಯಕ್ಕಾಗಿ ತನ್ನ ಗಂಡನನ್ನು ದಿಕ್ಕರಿಸುವ ಪರಿಗೆ ಹೊರಡುವಾಗ ತನ್ನ ಮಕ್ಕಳ ಬಗೆಗಿನ ಒಲವು ವ್ಯಕ್ತವಾಗುತ್ತದೆ.

ಜಗತ್ತಿನಲ್ಲಿ ಎಲ್ಲದಕ್ಕೂ ತನ್ನದೇ ಆದ ಬೆಲೆ ಇದೆ ಆದರೆ ಸೃಷ್ಟಿಕರ್ತ ತಾಯಿ ಮತ್ತು ಹೆಣ್ಣಿಗೆ ಮಾತ್ರ ಬೆಲೆ ಕಟ್ಟಲಾಗದ ಮೌಲ್ಯವಿದೆ. ತನ್ನ ಮಕ್ಕಳು ಮತ್ತು ಸಂಸಾರಕ್ಕಾಗಿ ಗಂಡನಾದವನು ಹೇಗೆ ಇದ್ದರೂ ಅದನ್ನು ಸಹಿಸಿಕೊಂಡು ಸಮಾಜದಲ್ಲಿ ಅದಕ್ಕಾಗಿ ತಾನು ತೊಡುವ ತ್ಯಾಗಕ್ಕೆ ಯಾವುದೇ ದೇವರು ಸಹ ಉತ್ತರವನ್ನು ಕೊಡಲಾರ ಎಂಬುದಕ್ಕೆ ಈ ಒಮ್ಮೆ ಹೆಣ್ಣಾಗು ಪ್ರಭುವೇ ಕಥಾ ಭಾಗವು ಉತ್ತರವಾಗಿ ನಿಲ್ಲುತ್ತದೆ. ಇಲ್ಲಿ ಕಥಾ ನಾಯಕಿಯ ಪಾತ್ರವು ತನ್ನ ತಾಯಿ, ದೇವರು ಮತ್ತು ಸಮಾಜ ಈಕೆಗೆ ಹೆಣ್ಣು ಎಂಬ ಪಾತ್ರ ನೀಡಿ ನಿರ್ವಹಿಸು ಎಂದಾಗ ಅದನ್ನು ಸಾಕಾರಗೊಳಿಸುವ ರೀತಿಯಲ್ಲಿ ಅದಕ್ಕೆ ನ್ಯಾಯ ಒದಗಿಸುವ ಕ್ರಿಯೆಯನ್ನು ಮಾಡುತ್ತಾಳೆ. ತಾಯಿ ಎಂಬ ಹೆಣ್ಣು ಎಂಬುವವಳೇ ದೇವರು ಎನ್ನುವ ಅಭಿಪ್ರಾಯ ನನ್ನದಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಬಾನು ಮುಷ್ತಾಕ್ (2012). ಒಮ್ಮೆ ಹೆಣ್ಣಾಗು ಪ್ರಭುವೇ–ಬಡವರ ಮಗಳು ಹೆಣ್ಣಲ್ಲ. ಅಭಿರುಚಿ ಪ್ರಕಾಶನ. ಮೈಸೂರು.
2. ನೇಮಿಚಂದ್ರ (2001). ಮಹಿಳಾ ಅಧ್ಯಯನ. ಅಂಕಿತ ಪ್ರಕಾಶನ. ಬೆಂಗಳೂರು.
3. ವಸುಧೇಂದ್ರ (2006). ನಮ್ಮಮ್ಮ ಅಂದ್ರೆ ನಂಗಿಷ್ಟ. ಛಂದ ಪುಸ್ತಕ. ಬೆಂಗಳೂರು.
4. ಶೇಷಗಿರಿರಾವ್ ಎಲ್. ಎಸ್. (2013). ಹೊಸಗನ್ನಡ ಸಾಹಿತ್ಯ ಚರಿತ್ರೆ. ಅಂಕಿತ ಪ್ರಕಾಶನ. ಬೆಂಗಳೂರು.
5. ನಾಯಕ ಜಿ. ಎಚ್. (2018). ಕನ್ನಡ ಸಣ್ಣ ಕಥೆಗಳು. ನ್ಯಾಷನಲ್ ಬುಕ್ ಟ್ರಸ್ಟ್. ನವ ದೆಹಲಿ.